

ಹೀರೊ ಸ್ಕ್ವೇರ್ ಬಳಿಯಿರುವ ಬಿಲ್ಲುಗಾರನ ಪ್ರತಿಮೆ




ಬಡ್ ಸ್ಪೆನ್ಸರ್ ಪ್ರತಿಮೆ



ರಾಯಲ್ ರೈಡಿಂಗ್ ಸ್ಕೂಲ್ ಮುಂಭಾಗದಲ್ಲಿರುವ ಕುದುರೆ ಮತ್ತು ಕುದುರೆ ಸವಾರನ ಪ್ರತಿಮೆ

ಪೊಲೀಸಪ್ಪನ ಶಿಲ್ಪ. ಶಿಲ್ಪಿ ಇಲೀಸ್ ಆಂಡ್ರಾಸ್, ತನ್ನ ತಾತನಿಂದ ಪ್ರೇರಣೆ ಹೊಂದಿ ಈ ಶಿಲ್ಪವನ್ನು 2008ರಲ್ಲಿ ರೂಪಿಸಿದರು. ಇದರ ಹೊಟ್ಟೆ ಮುಟ್ಟಿದರೆ ಅದೃಷ್ಟ ಖುಲಾಯಿಸುತ್ತದೆ ಎಂಬ ನಂಬಿಕೆ ಇದೆ.

**ಅಗಣಿತ ಪ್ರತಿಮಾಲೋಕ:** ಕಿಂಗ್ ಮಾಥಿಯಾಸ್ ಫೌಂಟೆನ್, ಫೆರೆಂಕ್ ಡಿಯಾಕ್ ಪ್ರತಿಮೆ, ಹಂಗೇರಿಯ ಮೊದಲ ರಾಜ ಸ್ಟೀಫನ್ ಪ್ರತಿಮೆ, ವಿಲಿಯಂ ಶೇಕ್ಸ್‌ಪಿಯರ್ ಪ್ರತಿಮೆ, ಆಸ್ಟ್ರೋಹಂಗೇರಿಯನ್ ರಾಣಿ ಎಲಿಜಬೆತ್ ಪ್ರತಿಮೆ, ಪ್ರಸಿದ್ಧ ಹಂಗೇರಿಯನ್ ಸಂಗೀತಕಾರ ಫೆರೆನ್ಸ್ ಲಿಸ್ಟ್ ಪ್ರತಿಮೆ... ಪಟ್ಟಿ ಮುಗಿಯುವುದೇ ಇಲ್ಲ.

ಬುಡಾಪೆಸ್ಟ್‌ನ ಶಿಲ್ಪಗಳು ಮತ್ತು ಪ್ರತಿಮೆಗಳ ಲೋಕ ಅನನ್ಯವಾದದ್ದು ಮತ್ತು ಅನಂತವಾದದ್ದು. ಒಂದೊಂದರ ಹಿಂದೆಯೂ ಒಂದೊಂದು ಕಥೆಯಿದೆ, ಸಂದೇಶವಿದೆ ಮತ್ತು ಅರ್ಥವಿದೆ. ಈ ನಗರದ ನಿರ್ಮಾತೃಗಳು ಮತ್ತು ಇಲ್ಲಿನ



ಶೂಗಳ ಸ್ಮಾರಕ

ಸ್ಥಳೀಯರ ಕ್ರಿಯಾಶೀಲತೆ, ಆಸಕ್ತಿ, ಅಭಿರುಚಿ, ಕಲಾಪ್ರಜ್ಞೆ, ಹಾಸ್ಯಪ್ರಜ್ಞೆ, ಸೌಂದರ್ಯಪ್ರಜ್ಞೆ ಇದರಿಂದ ತಿಳಿಯುತ್ತದೆ.

ಬುಡಾಪೆಸ್ಟ್ ನಗರದ ಪ್ರತಿಮೆಗಳು ಕೇವಲ ಶಿಲ್ಪವಷ್ಟೇ ಅಲ್ಲ ಅವುಗಳು ಕಲಾಕೃತಿಗಳಂತಿದ್ದು, ರಾಜಕೀಯ, ಇತಿಹಾಸ ಮತ್ತು ಮಾನವತೆಯ ಪ್ರತಿಬಿಂಬಗಳಾಗಿವೆ. ನೋಡುಗರಲ್ಲಿ ಕುತೂಹಲ ಮತ್ತು ಹೊಸ ಹೊಳಹುಗಳನ್ನು, ಭಾವಸ್ಪಂದನೆಯನ್ನೂ ಮೂಡಿಸುತ್ತವೆ.